ದಿಃ 13.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಟಿ.ಎಸ್.ಟಿ ವಕೀಲರಿಂದ ,**

1. ನಾನು ಬಿ.ಎಸ್.ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ನನ್ನ ತಂದೆಯ ಅಕ್ಕ. ರುದ್ರೇಶಪ್ಪನಿಗೆ 4 ಜನ ಅಣ್ಣತಮ್ಮಂದಿರು. ವಾದಿಯ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯ ಗಂಡ ರುದ್ರೇಶಪ್ಪನಿಗೆ ಹಿಸ್ಸೆಯಲ್ಲಿ ಯಾವ್ಯಾವಾ ಆಸ್ತಿ ಬಂದಿರುತ್ತದೆ ಎಂದು ನಿಖರವಾಗಿ ಗೊತ್ತಿರುವುದಿಲ್ಲ, ಆದರೆ ದಾವಾಸ್ವತ್ತು ಮಾತ್ರ ಅವರ ಹಿಸ್ಸೆಗೆ ಬಂದಿರುತ್ತದೆ ಎಂದು ಗೊತ್ತಿರುತ್ತದೆ. ಯಾವ್ಯಾವ ಸರ್ವೆ ನಂಬರ್ ಮತ್ತು ಯಾವ್ಯಾವಾ ನಿವೇಶನದ ಸಂಖ್ಯೆಗಳು ಅವರ ಪಾಲಿಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯ ಗಂಡನ ಕುಟುಂಬದಲ್ಲಿ 2004 ರಲ್ಲಿ ಹಿಸ್ಸೆಯಾಗಿರುತ್ತದೆ. 2004 ರಲ್ಲಿ ನನಗೆ ಸುಮಾರು 06 ವರ್ಷ ವಯಸ್ಸಾಗಿತ್ತು. 2004 ರಲ್ಲಿ ಹಿಸ್ಸೆಯಾದ ವಿಚಾರವನ್ನು ನನ್ನ ಮಾವ ನನಗೆ ತಿಳಿಸಿರುತ್ತಾರೆ. ನಾನು ಚನ್ನಗಿರಿ ತಾಲ್ಲೂಕಿನ ಖಾಯಂ ವಾಸಿಯಾಗಿದ್ದು, ಈಗ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನಾನು ಬಿ.ಎಸ್.ಸಿ ಮಾಡಬೇಕಾದರೆ ನಾನು 3 ವರ್ಷ ವಾದಿಯ ಮನೆಯಲ್ಲೆ ವಾಸವಾಗಿದ್ದೆ. 2004 ರಲ್ಲಿ ಹಿಸ್ಸೆಯಾದ ಸಂದರ್ಭದಲ್ಲಿ ವಾದಿಯ ಗಂಡನ ಕುಟುಂಬವನ್ನು ಯಾರು ನಿರ್ವಹಿಸುತ್ತಿದ್ದರು ಮತ್ತು ಏನೇನು ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

2. ವಾದಿಯ ಗಂಡ ರುದ್ರೇಶಪ್ಪ ಪಾರ್ವತಮ್ಮ ಎನ್ನುವವರನ್ನು ಮದುವೆಯಾಗಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಪಾರ್ವತಮ್ಮನವರು ಸಹ ಅಗರದಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯವಿಚಾರಣೆಗೆ ಮಾಹಿತಿಯನ್ನು ವಾದಿಯ ಗಂಡ ರುದ್ರೇಶಪ್ಪನವರು ಕೊಟ್ಟಿರುತ್ತಾರೆ. ಸುನಂದಮ್ಮನವರು ಈ ದಾವೆಯನ್ನು ಅವರ ಮಾವನ ವಿರುದ್ಧ ಸಲ್ಲಿಸಿರುತ್ತಾರೆ. ಯಾವಾ ಪರಿಹಾರ ಕೋರಿ ದಾವೆ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆಂದು ಮನೆ ಅವರಿಗೆ ಸೇರಬೇಕೆಂದು ದಾವೆ ಮಾಡಿರುತ್ತಾರೆಂದು ಹೇಳುತ್ತಾರೆ. ಈ ದಾವೆಯನ್ನು ಆಸ್ತಿ ಸಂಖ್ಯೆ 382/271/1 ರ ಆಸ್ತಿಗೆ ಸಂಬಂಧ ಈ ದಾವೆ ಮಾಡಿರುತ್ತಾರೆ. ವಾದಿಯ ಗಂಡ ರುದ್ರೇಶಪ್ಪ ವಾದಿಗೆ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ. ವಾದಿಯು ಸದರಿ ಆಸ್ತಿ ತಮ್ಮ ಗಂಡ ರುದ್ರೇಶಪ್ಪನಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ಹೇಳಿರುತ್ತಾರೆ . ದಾವಾಸ್ವತ್ತು ವಿಭಾಗಪತ್ರದ ಮೂಖಾಂತರ ರುದ್ರೇಶಪ್ಪನಿಗೆ ಬಂದಿರುತ್ತದೆ. ವಿಭಾಗ ಪತ್ರದಲ್ಲಿ ಈ ಆಸ್ತಿ ಎಷ್ಟನೇ ಆಸ್ತಿ ಎಂದು ಗೊತ್ತಿರುವುದಿಲ್ಲ. ದಾನಪತ್ರದ ಆಸ್ತಿಯ ಚಕ್ಕುಬಂಧಿ ನನಗೆ ನೆನಪಿರುವುದಿಲ್ಲ. ವಾದಿಯ ಗಂಡ ರುದ್ರೇಶಪ್ಪ ದಾನಪತ್ರ

ಬರೆದುಕೊಡುವ ಸಂದರ್ಭದಲ್ಲಿ ಮತ್ತು ಆ ನಂತರ ಆರೋಗ್ಯದಿಂದ ಇರುತ್ತಾರೆಂದರೆ ಸರಿ. ಸಾಕ್ಷಿಯು ಮುಂದುವರೆಂದು ಈಗ ಆರೋಗ್ಯ ಸ್ವಲ್ಪ ಚೆನ್ನಾಗಿಲ್ಲ ಎಂದು ಹೇಳುತ್ತಾರೆ. ರುದ್ರೇಶಪ್ಪನವರು ದಾವಾಸ್ತಿಯನ್ನು ಬಿಟ್ಟು ಬೇರೆ ಆಸ್ತಿಯನ್ನು ಬೇರೆಯವರಿಗೆ ವರ್ಗಾವಣೆ ಮಾಡಿಲ್ಲ ಎಂದರೆ ಸರಿ. ದಾನಪತ್ರಕ್ಕೆ ನಾನು ಸಾಕ್ಷಿದಾರನಾಗಿ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಸಹಿಯಾಕಿರುತ್ತೇನೆ. ದಾನಪತ್ರವನ್ನು ಅಶ್ವಥನಾರಾಯಣರವರು ಸಿದ್ಧ ಮಾಡಿಸಿರುತ್ತಾರೆ. ರುದ್ರೇಶಪ್ಪನ ಹೇಳಿಕೆಯ ಮೇರೆಗೆ ದಾನಪತ್ರವನ್ನು ಸಿದ್ಧ ಮಾಡಿರುತ್ತಾರೆ. ದಾನಪತ್ರವನ್ನು ವಿಭಾಗಪತ್ರದ ಆಧಾರದ ಮೇಲೆ ಸಿದ್ಧ ಪಡಿಸಿರುತ್ತಾರೆ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾನಪತ್ರವನ್ನು ಬಿಟ್ಟು ಬೇರೆ ದಾಖಲೆಯನ್ನು ನೋಡಿರುವುದಿಲ್ಲ ಎಂದರೆ ಸರಿ. ನಾನು ವಾದಿಯ ಮನೆಯಲಿ 03 ವರ್ಷಗಳ ಕಾಲ ವಾಸವಿದ್ದ ಕಾರಣ ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನನ್ನ ಮುಖ್ಯವಿಚಾರಣೆಯಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರುದ್ರೇಶಪ್ಪನವರು ದಾನಪತ್ರದಲ್ಲಿ ತಮ್ಮ ಆರೋಗ್ಯ ಸರಿಯಾಗಿಲ್ಲ ಎಂದು ಹೇಳಿ ಆ, ಕಾರಣಕ್ಕಾಗಿ ದಾನಪತ್ರ ಬರೆದುಕೊಡುತ್ತಿರುವುದಾಗಿ ದಾನಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಆ ಸಂದರ್ಭ ದಲ್ಲಿ ಆರೋಗ್ಯವಾಗಿದ್ದರು ಎಂದು ಹೇಳುತ್ತಾರೆ. ರುದ್ರೇಶಪ್ಪನವರಿಗೆ ಈಗ ಆರೋಗ್ಯ ಚೆನ್ನಾಗಿಲ್ಲ ಎಂದು ಪ್ರಥಮ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ವಾದಿಯರಿಗೆ ದುರ್ಲಾಭ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ